# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 08.08.2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ಲತಾ. ಕೆ – ಸದಸ್ಯರು | |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | |
| ವಿ. ವಾಗಿಶ್ – ಸದಸ್ಯರು | |
| ಮಂಜುನಾಥ – ಸದಸ್ಯರು | |
| ಎಲ್. ನಾಗರತ್ನ – ಸದಸ್ಯರು | |
| ವರಲಕ್ಷ್ಮಿ. ಜೆ – ಸದಸ್ಯರು | |
| ಆಶಾ ಸುರೇಶ್ – ಸದಸ್ಯರು | |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/91/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಮುಲೆಅ/ಆಯವ್ಯಯ/ಪಿಆರ್/21/2010–11, ದಿನಾಂಕ ಃ 02–06–2011ರಲ್ಲಿ ವಿವರಿಸಿರುವಂತೆ, ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಅಂದಾಜುಗಳನ್ನು ತಯಾರಿಸಿ ಸ್ಥಾಯಿ ಸಮಿತಿ ಮುಂದೆ ಮಂಡಿಸಬೇಕಿರುತ್ತದೆ. ಈ ಪ್ರಕಾರ ನಗರ ಪಾಲಿಕೆಯ ಎಲ್ಲಾ ಇಲಾಖೆಗಳ ಆದಾಯ ಮತ್ತು ವೆಚ್ಚಗಳ ವಿವರಗಳನ್ನು ಕ್ರೋಡೀಕರಿಸಿ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2011–12ನೇ ಸಾಲಿನ ಆಯವ್ಯಯ ಅಂದಾಜುಗಳ ವಿವರವುಳ್ಳ ತಃಖ್ತೆಯನ್ನು ತಯಾರಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :–* *ಮಾನ್ಯ ಆಯುಕ್ತರವರು ದಿನಾಂಕ 02–06–2011ರ ಟಿಪ್ಪಣಿಯೊಂದಿಗೆ ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಸೆಕ್ಷನ್ 166ರ ಪ್ರಕಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯ ಹಾಗೂ 2011–12ನೇ ಸಾಲಿನ ಆಯವ್ಯಯ ಅಂದಾಜುಗಳ ಕರಡು ಪ್ರತಿಯನ್ನು ನಿಯಮಾವಳಿಗಳ ಅನ್ವಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿದ್ದು; ಸದರಿ ಕರಡು ಆಯವ್ಯಯದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿಗಳೊಂದಿಗೆ ಸಮಿತಿಯು ಪ್ರತ್ಯೇಕ ಸಭೆಗಳನ್ನು ವಿವಿಧ ದಿನಾಂಕಗಳಂದು ನಡೆಸಿ, ಕೂಲಂಕುಶವಾಗಿ ಚರ್ಚಿಸಲಾಯಿತು. ಅಲ್ಲದೇ ಪೂಜ್ಯ ಮಹಾಪೌರರು, ಮಾನ್ಯ ಉಪ ಮಹಾಪೌರರು, ಎಲ್ಲಾ ಪಕ್ಷಗಳ ನಾಯಕರುಗಳು ಹಾಗೂ ಮಾನ್ಯ ಆಯುಕ್ತರವರೊಂದಿಗೂ ಸಹ ಸಭೆಗಳನ್ನು ನಡೆಸಿ ವಿವರವಾಗಿ ಚರ್ಚಿಸಿದ ತರವಾಯ; ಸಮಿತಿಯು ಕರಡು ಪ್ರತಿಯಲ್ಲಿ ಅಗತ್ಯ ತಿದ್ದುಪಡಿಗಳನ್ನು ಮಾಡಿ ಅನುಮೋದಿಸಿದೆ. ಅದರಂತೆ ಮಹಾನಗರ ಪಾಲಿಕೆಯ ಸಭೆಯ ಮುಂದೆ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.*

***02]. ವಿಷಯದ ಸಂಖ್ಯೆ :–ತೆಆಸ್ಥಾಸ/123/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 28–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರು ಕಡತದ ಕಂಡಿಕೆ 5 ರಲ್ಲಿ ನಮೂದಿಸಿದ ಒಟ್ಟು 43 ಕಾಮಗಾರಿಗಳಿಗೆ ರೂ.2338.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ಥಾವನೆಯನ್ನು ಜಂಟಿ ಆಯುಕ್ತರು, ಮಹದೇವಪುರರವರ ಮೂಲಕ ಸಲ್ಲಿಸಿರುತ್ತಾರೆ.

ಕಂಡಿಕೆ 14ರಲ್ಲಿ ಪ್ರಸ್ತಾವನೆಯನ್ನು ಆದೇಶಕ್ಕೆ ಸಲ್ಲಿಸಿದ್ದು, "ಅ" ರಲ್ಲಿ ಸದರಿ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಸೂಕ್ತ ಅನುದಾನವನ್ನು ಒದಗಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ಸದರಿ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ 2011–12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನವಾಗಿ ರೂ.2318.00 ಲಕ್ಷಗಳನ್ನು ಮಹದೇವಪುರ ವಿಧಾನಸಬಾ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿರಿಸಿ ಆಯವ್ಯಯ ಲೆಕ್ಕ ಶೀರ್ಷಿಕೆ 19– ಕಾಮಗಾರಿ ಯೋಜನಾ ಶಾಖೆ – ರಸ್ತೆಗೆ ಸಂಬಂದಪಟ್ಟ ಕೆಲಸಗಳು – ಪಿ.ಸಂಖ್ಯೆ 2327 ರಲ್ಲಿ ಅವಕಾಶ ಕಲ್ಪಿಸಬೇಕಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದ ಮೊತ್ತ ರೂ.2318.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***2011–12ನೇ ಸಾಲಿನ ಆಯವ್ಯಯದಲ್ಲಿ ಮಹಾದೇವಪುರ ವಿಧಾನ ಸಭಾಕ್ಷೇತ್ರದ ಅಭಿವೃದ್ಧಿಗಾಗಿ ಒದಗಿಸುವ ಅನುದಾನದಲ್ಲಿ ಉಪಯೋಗಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ದಿನಾಂಕ : 28–06–2011ರ ಆಯುಕ್ತರ ಟಿಪ್ಪಣಿ ಒಪ್ಪದೆ.***

***03]. ವಿಷಯದ ಸಂಖ್ಯೆ :–ತೆಆಸ್ಥಾಸ/201/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(3ಎ)ಸಿಪಿಆರ್/04/10–11, ದಿನಾಂಕ : 22–07–2011ರಲ್ಲಿ ವಿವರಿಸಿರುವಂತೆ, ಪಾಲಿಕೆಯ ವಲಯಗಳಲ್ಲಿ ಗೌರವಧನ ಆಧಾರದ ಮೇಲೆ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನ್ಯಾಯಾಧೀಶರು ಇವರ ಮಾಸಿಕ ಗೌರವಧನವನ್ನು ಹೆಚ್ಚಿಸುವ ಬಗ್ಗೆ, ವಿವಿಧ ನ್ಯಾಯಾಲಯಗಳಲ್ಲಿರುವ ದಾವೆಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸುವ ಸಲುವಾಗಿ ಪಾಲಿಕೆಯ ಎಲ್ಲಾ 8 ವಲಯಗಳಿಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳನ್ನು ಕಾನೂನು ಇಲಾಖೆಯಲ್ಲಿ ಅಥವಾ "Out Source" ಮುಖಾಂತರ ಹೆಸರುಗಳನ್ನು ಪಡೆದು ನೇಮಿಸಿಕೊಂಡು, ಆಯಾ ವಲಯಗಳಿಗೆ ಸಂಬಂಧಪಟ್ಟಂತೆ ವಿವಿಧ ನ್ಯಾಯಾಲಯಗಳಲ್ಲಿರುವ ದಾವೆ ಪ್ರಕರಣಗಳನ್ನು ಇತ್ಯರ್ಥಪಡಿಸಲು ಮತ್ತು ಪಾಲಿಕೆಯ ಸ್ವತ್ತುಗಳನ್ನು ಸಂರಕ್ಷಿಸಲು ಹೆಚ್ಚಿನ ಆದ್ಯತೆ ನೀಡುವಂತಹ ಕೆಲಸಗಳನ್ನು ನಿರ್ವಹಿಸಲು ಸದರಿಯವರುಗಳಿಗೆ ಮಾಸಿಕ ಗೌರವ ಧನ ವೇತನ ರೂ 10,000/– ಮತ್ತು ರೂ 2500/–ಗಳ ಭತ್ಯೆಗಳನ್ನು ನಿಗಧಿಪಡಿಸಿ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಹಾಗೂ ಸಂಖ್ಯೆ : ಬಿ12(3ಎ)ಪಿರ್31/09–10, ದಿನಾಂಕ : 21–07–2009 ರ ಅಧಿಕೃತ ಜ್ಞಾಪನಾ ಪತ್ರದಂತೆ ಪಾಲಿಕೆಯ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಲಾಗಿರುತ್ತದೆ. ತದನಂತರ ಸದರಿ ನಿವೃತ್ತ ಜಿಲ್ಲಾ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳ ಸೇವೆಯನ್ನು ಕೆಲವೊಂದು ವಲಯಗಳಲ್ಲಿ ಮಾತ್ರ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲಾಗಿರುತ್ತದೆ.

ಈ ಸಂಬಂಧವಾಗಿ, ಈ ಕಛೇರಿಯ ಆದೇಶದ ಸಂಖ್ಯೆ:ಬಿ12(3ಎ)ಪಿಆರ್03/11–12, ದಿ:09–05–2011 ರ ಆದೇಶದನ್ವಯ ಪಾಲಿಕೆಯ ವಲಯ ಅಪರ/ಜಂಟಿ ಆಯುಕ್ತರುಗಳಿಗೆ **ಆಡಳಿತ ಶಾಖೆಯ ವಿಷಯಗಳನ್ನು ಹೊರತುಪಡಿಸಿ** ಹಾಗೂ ವಕಾಲತ್ತುಗಳಿಗೆ ಸಹಿ ಮಾಡುವ ಅಧಿಕಾರವನ್ನು ಕೇಂದ್ರ ಕಛೇರಿಯಲ್ಲಿನ ಕಾನೂನು ಕೋಶದ ಮುಖ್ಯಸ್ಥರಲ್ಲಿ ಉಳಿಸಿ,

ವಲಯ ವ್ಯಾಪ್ತಿಗೆ ಒಳಪಡುವ ಕಂದಾಯ ಇಲಾಖೆ, ಕಾಮಗಾರಿ ಇಲಾಖೆ, ಆರೋಗ್ಯ ಇಲಾಖೆ, ಜಾಹೀರಾತು ವಿಭಾಗ, ಆಸ್ತಿ ವಿಭಾಗ, ಅರಣ್ಯ ಇಲಾಖೆ, ಅಂಕಿ ಅಂಶ ವಿಭಾಗ, ಪಶುಪಾಲನೆ ಇಲಾಖೆ, ವಿದ್ಯಾ ಇಲಾಖೆ ಹಾಗೂ ಇತರೇ ಇಲಾಖೆಗಳಿಗೆ ಸಂಬಂಧಿಸಿದಂತೆ, ವಿವಿಧ ನ್ಯಾಯಾಲಯಗಳಲ್ಲಿನ ಎಲ್ಲಾ ಪ್ರಕರಣಗಳ ಕಾನೂನು ವ್ಯವಹರಣೆಯನ್ನು ವಲಯ ವ್ಯಾಪ್ತಿಯ ಕಾನೂನು ವಿಭಾಗದ ಸಲಹೆಗಾರರ ಸಹಕಾರದೊಂದಿಗೆ ನಿರ್ವಹಿಸಲು ಅಧಿಕಾರ ನೀಡಲಾಗಿರುತ್ತದೆ.

ಮುಂದುವರೆದಂತೆ, ಪ್ರಸ್ತುತ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ವಲಯ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|
| 1. | ಪೂರ್ವ | 1503 |
| 2. | ಪಶ್ಚಿಮ | 1131 |
| 3. | ದಕ್ಷಿಣ | 1530 |
| 4. | ದಾಸರಹಳ್ಳಿ | 32 |
| 5. | ಬೊಮ್ಮನಹಳ್ಳಿ | 138 |
| 6. | ಮಹದೇವಪುರ | 138 |
| 7. | ಯಲಹಂಕ | 148 |
| 8. | ರಾಜರಾಜೇಶ್ವರಿ ನಗರ | 163 |
| | ಒಟ್ಟು : | **4783** |

ಈ ಸಂಬಂಧವಾಗಿ, ಪಾಲಿಕೆಯ ಎಲ್ಲಾ ವಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಹಾಗೂ ಸಂ:ಬಿ12(3ಎ)ಪಿರ್31/09–10, ದಿನಾಂಕ:21–07–2009 ರ ಅಧಿಕಾರ ಪ್ರತ್ಯಾಯೋಜನೆಯಂತೆ ಪಾಲಿಕೆಯ ದಕ್ಷಿಣ, ರಾಜರಾಜೇಶ್ವರಿ ನಗರ, ಮಹದೇವಪುರ, ಬೊಮ್ಮನಹಳ್ಳಿ ಮತ್ತು ದಾಸರಹಳ್ಳಿ ವಲಯಗಳಲ್ಲಿ ವಲಯ ಹಂತದಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳು ದಿನಾಂಕ:22–06–2011 ಮತ್ತು 23–06–2011. ರಂತೆ ಮನವಿ ಸಲ್ಲಿಸಿ ಪ್ರಸ್ತುತ ಪಡೆಯುತ್ತಿರುವ ಮಾಸಿಕ ಗೌರವ ಧನ ರೂ 10000+2500(ಭತ್ಯೆ) ಒಟ್ಟು 12,500 ಗಳಿಂದ ರೂ 30,000+10000(ಭತ್ಯೆ) ಒಟ್ಟು 40,000 ಗಳಿಗೆ ಹೆಚ್ಚಿಸಿ ಗೌರವಧನವನ್ನು ಪರಿಷ್ಕರಿಸಲು ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ, ಪಾಲಿಕೆಯ ಎಲ್ಲಾ ವಲಯಗಳಲ್ಲಿ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಜಿಲ್ಲಾ ನ್ಯಾಯಾಧೀಶರು/ನಿವೃತ್ತ ಸಿವಿಲ್ ನ್ಯಾಯಾಧೀಶರುಗಳಿಗೆ ಹಾಲಿ ಪಾವತಿಸಲಾಗುತ್ತಿರುವ ಮಾಸಿಕ ಗೌರವಧನವನ್ನು ರೂ 12,500/– ಗಳಿಂದ ರೂ 20,000/– ಗೌರವಧನ ಹಾಗೂ ರೂ 4,000/–ಗಳನ್ನು ಸಾರಿಗೆ ಭತ್ಯೆ (Conveyance Allowance) ಹೆಚ್ಚಿಸುವ ಸಂಬಂಧ ಪಾಲಿಕೆಯ ಸಭೆ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ 22–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***04]. ವಿಷಯದ ಸಂಖ್ಯೆ :–ತೆಆಸ್ಥಾಸ/232/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ, ರಾಜರಾಜೇಶ್ವರಿನಗರ ವಲಯ ವತಿಯಿಂದ Improvement

to road and Drain works at Ward No 160 Total Rs.378.78 Lakhs ಗೆ 19 ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಕಡತದ ಕಂಡಿಕೆ (2) ರಲ್ಲಿ ವಿವರಿಸಿರುವ ಕಾಮಗಾರಿಗಳಿಗೆ ಕಂಡಿಕೆ ಸಂಖ್ಯೆ 10ರಲ್ಲಿ 2011–12ನೇ ಆಯವ್ಯಯದ ಲೆಕ್ಕ ಶೀಷಿಕೆ ಪಿ.ಸಂಖ್ಯೆ ಪಿ0541–ತುರ್ತು ಕಾಮಗಾರಿಗಳ ಅಡಿಯಲ್ಲಿ ಸದರಿ ಕಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ.

ಮೆಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿರುವ 19 ಕಾಮಗಾರಿಗಳ ಮೊತ್ತ ರೂ.378.78 ಲಕ್ಷಗಳ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ0541 ಅಡಿಯಲ್ಲಿ ಸೂಕ್ತ ಅನುದಾನ ಒದಗಿಸಿಕೊಳ್ಳಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– 2011–12ನೇ ಸಾಲಿನ ಆಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗೆ ಮೀಸಲಿಡುವ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಷರತ್ತಿಗೆ ಒಳಪಡಿಸಿ ದಿನಾಂಕ : 03–08–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/234/2011–12

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಯಶವಂತಪುರ ರವರು, Construction of RCC drain from Old Panchyath to SWD along 5th cross LN Colony, 1st C Main and Surrounding area in Ward No.37 Yeshwanthpur for Rs.500.00 Lakhs ಕಾಮಗಾರಿಗೆ ರೂ.500.00 ಲಕ್ಷಗಳಿಗೆ ಲೆಕ್ಕ ಶೀರ್ಷಿಕೆ ಪಿ.2309/133ರಲ್ಲಿ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ 2010–11ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 21–ಮಳೆ ನೀರಿನ ಚರಂಡಿಗಳ ಕಾಮಗಾರಿಗಳು–ಪಿ.2309/133 ಯಶವಂತಪುರ ಮಳೆ ನೀರಿನ ಚರಂಡಿ ಕಾಮಗಾರಿಗಳು ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.500.00 ಲಕ್ಷಗಳನ್ನು ಮೀಸಲಿರಿಸಿದ್ದು, ಕಾಮಗಾರಿ ಸಂಖ್ಯೆಯನ್ನು ನೀಡಿರುವುದಿಲ್ಲ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.500.00 ಲಕ್ಷಗಳ ಅನುದಾನವನ್ನು ಒದಗಿಸಿ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 02–08–2011ರ ಆಯುಕ್ತರ ಟಿಪ್ಪಣಿ ಒಪ್ಪುತ್ತಾ ಕಾಮಗಾರಿ ಸಂಖ್ಯೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.***

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/238/2011–12

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 11ರಲ್ಲಿನ 14 ಕಾಮಗಾರಿಗಳ ಅಂದಾಜು ಮೊತ್ತ ರೂ.289.55 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ವಲಯ ರಸ್ತೆಗಳ ಡಾಂಬರೀಕರಣ ಪಿ0619 ರಲ್ಲಿ ಹಾಗೂ 8 ಕಾಮಗಾರಿಗಳ ಅಂದಾಜು ಮೊತ್ತ ರೂ.216.50 ಲಕ್ಷಗಳಿಗೆ ಒಟ್ಟಾರೆ ರೂ.506.25 ಲಕ್ಷಗಳಿಗೆ 2009–10ನೇ ಸಾಲಿನ ಆಯವ್ಯಯದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾಮಗಾರಿ ಸಂಕೇತ ನೀಡಲಾಗಿದ್ದು, ಸದರಿ ಕಾಮಗಾರಿಗಳನ್ನು 2010–11ನೇ ಸಾಲಿನಲ್ಲಿ ಕಾಮಗಾರಿಗಳ ಮರು ನವೀಕರಣ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಕಾಮಗಾರಿಗಳನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0619 ಮತ್ತು ಪಿ0625 ಅಡಿ ಬರುವ ಮುಂದುವರೆದ ಕಾಮಗಾರಿಗಳು ಅಡಿ ಅಳವಡಿಸಿಕೊಳ್ಳಲಾಗಿದ್ದು, ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ರವರಿಗೆ ನಿರ್ವಹಿಸಲು ವಹಿಸಲಾಗಿದೆ. ಸದರಿ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಮೇಲ್ಕಂಡ ವಾರ್ಡ್ ಸಂಖ್ಯೆ 11 ರಲ್ಲಿನ 14 ಕಾಮಗಾರಿಗಳ ಅಂದಾಜು ಮೊತ್ತ ರೂ.289.55 ಲಕ್ಷಗಳಿಗೆ ಲೆಕ್ಕಶೀರ್ಷಿಕೆ – ವಲಯ ರಸ್ತೆಗಳ ಡಾಂಬರೀಕರಣ ಪಿ0619 ರಲ್ಲಿ ಹಾಗೂ 8 ಕಾಮಗಾರಿಗಳ ಅಂದಾಜು ಮೊತ್ತ ರೂ.216.50 ಲಕ್ಷಗಳಿಗೆ ಒಟ್ಟಾರೆ ರೂ.506.25 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದ ಮೇಲ್ಕಂಡ ಲೆಕ್ಕ ಶೀರ್ಷಿಕೆಗಳಲ್ಲಿ ಅನುದಾನ ಒದಗಿಸಿಕೊಂಡು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ಹೊಸ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 05–08–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ವಲಯ ರಸ್ತೆಗಳ ಡಾಂಬರೀಕರಣ ಪಿ 0619 ರಲ್ಲಿ ಮುಂದುವರಿದ ಕಾಮಗಾರಿಗಳಿಗೆ ಒದಗಿಸುವ ಅನುದಸದಲ್ಲಿ ಹೊಸ ಜಾಬ್‌ಕೋಡ್ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.***

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**